**ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ**

ಸಿಸಿ ನಂ. 2/2021

| | | |
|---|---|---|
| ಸಾಕ್ಷಿಯ ಹೆಸರು | ಎಂ.ಕೆ.ಶಂಕರಯ್ಯ | ಪಿ.ಡಬ್ಲ್ಯು-6 |
| ತಂದೆಯ ಹೆಸರು | ಲೇಟ್ ಕಾಳಯ್ಯ | ಸಿ.ಡಬ್ಲ್ಯು-17 |
| ವಯಸ್ಸು | 61 ವರ್ಷ | |
| ಉದ್ಯೋಗ | ನಿವೃತ್ತ ಪಿ ಎಸ್ ಐ | ದಿನಾಂಕಃ 04-01-2024 |
| ವಾಸ | ಹಾಸನ . | ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು ಆಗಸ್ಟ್ 2020 ರಿಂದ ಫೆಬ್ರವರಿ -2021 ರವರೆಗೆ ಆಲೂರಿನ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ19-08-2020 ರಂದು ಬೆಳಿಗ್ಗೆ 10-30 ರಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿಕೊಂಡು ದಿಃ17-08-2020 ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ಆಲೂರು - ಕದಾಳು ಎನ್ ಹೆಚ್-75 ರಸ್ತೆಯಲ್ಲಿ ಬೈಕ್ ಮತ್ತು ಬೈಕ್ ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ಬಗ್ಗೆ ನೀಡಿದ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊ. 163/20 , ಕಲಂ 279 ದ 304(ಎ) ಐ ಪಿ ಸಿ ರೀತ್ಯಾ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರಕರಣವು ಘೋರ ಅಪರಾಧವಾದ್ದರಿಂದ ಮುಂದಿನ ತನಿಖೆಗಾಗಿ ಕಡತವನ್ನು ಪಿ ಐ ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಸದರಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು , ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಸದರಿ ದಾಖಲೆ ಪ್ರ.ವ.ವರದಿಯಾಗಿದ್ದು , ಸದರಿ ದಾಖಲೆಯನ್ನು ನಿಪಿ-11 ಎಂದು , ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಟಿ.ಎಸ್.ಎಸ್ .** ಆರೋಪಿ ಪರ ವಕೀಲರಿಂದಃ ಸ

ಅಪಘಾತವಾದ ಬಗ್ಗೆ ಆಸ್ಪತ್ರೆಯಿಂದ ಪೋಲೀಸ್ ಠಾಣೆಗೆ ಯಾವುದೇ ಮಾಹಿತಿ ಬಂದಿರಲಿಲ್ಲ. ದೂರನ್ನು ಪಿರ್ಯಾದುದಾರರೇ ಬರೆದು ತಂದಿದ್ದರು. ಪಿರ್ಯಾದುದಾರರಿಗೆ ಪರಿಹಾರ ಪಡೆಯಲು ಅನುಕೂಲವಾಗಲಿ ಎಂದು ಸುಳ್ಳು ದೂರು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.